ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕರ್ನಾಟಕ ಸರ್ಕಾರ

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ./ 4 /2018-19

ದಿನಾಂಕ: 29-09-2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯ ಪ್ರಕೃತಿ ವಿಕೋಪ ಪರಿಹಾರ ಕಾರ್ಯ ಸಂಬಂಧ ನಿಯೋಜಿತರಾದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ಪತ್ರ ಸಂಖ್ಯೆ: ಸಿಎಎಲ್(1)ಸಿಆರ್:160:2017-18, ದಿನಾಂಕ 03.09.2018

---

ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಪ್ರಸ್ತುತ ಪರಿಹಾರ ವಿತರಣೆ, ಮೂಲ ಸೌಲಭ್ಯ ಕಲ್ಪಿಸುವಿಕೆ / ಪುನರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಸಂಬಂಧ ಉಲ್ಲೇಖದ ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ಅಧಿಕೃತ ಜ್ಞಾಪನದಂತೆ 9 ಅಧಿಕಾರಿ / ಸಿಬ್ಬಂದಿಗಳನ್ನು ಈ ಜಿಲ್ಲೆಗೆ ತಾತ್ಕಾಲಿಕವಾಗಿ ನಿಯೋಜಿಸಲಾಗಿರುತ್ತದೆ.

ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ಉಲ್ಲೇಖದ ಅಧಿಕೃತ ಜ್ಞಾಪನದಂತೆ ಕೊಡಗು ಜಿಲ್ಲೆಗೆ ತುರ್ತು ಪರಿಹಾರ ಕಾರ್ಯಕ್ಕಾಗಿ ನಿಯೋಜಿಸಿರುವ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳನ್ನು ಸಮೀಕ್ಷೆ ಕಾರ್ಯಕ್ಕಾಗಿ ತಹಶೀಲ್ದಾರರು, ಸೋಮವಾರಪೇಟೆ ಮತ್ತು ಮಡಿಕೇರಿ ತಾಲ್ಲೂಕು ಇವರ ಬಳಿ ನಿಯೋಜಿಸಲಾಗಿತ್ತು.

| ಕ್ರ.ಸಂ | ಹೆಸರು | ಕ್ರ.ಸಂ | ಹೆಸರು |
|---|---|---|---|
| 1 | ರೇವಣ್ಣ, (ರಾ.ನಿ.) | 5 | ಬಸವರಾಜು (ಗ್ರಾ.ಲೆ) |
| 2 | ಕೃಷ್ಣಮೂರ್ತಿ (ಗ್ರಾ.ಲೆ) | 6 | ಪ್ರಶಾಂತ್ ಹೊನ್ನಳ್ಳಿ (ಗ್ರಾ.ಲೆ) |
| 3 | ಸಿದ್ದರಾಜು (ಗ್ರಾ.ಲೆ) | 7 | ಗುಂಡಣ್ಣ ಗೌಡ (ಗ್ರಾ.ಲೆ) |
| 4 | ಅನಿಲ್ ಕುಮಾರ್ (ಗ್ರಾ.ಲೆ) | 8 | ರೇವಣ್ಣ ಎನ್. (ಗ್ರಾ.ಲೆ) |
| | | 9 | ಸುಮಂತ್ ಕುಮಾರ್ (ಗ್ರಾ.ಲೆ) |

ಮೇಲ್ಕಂಡಂತೆ ನಿಯೋಜಿತ ಅಧಿಕಾರಿ / ಸಿಬ್ಬಂದಿ ಸಮರೋಪಾದಿ ಮತ್ತು ಪ್ರಶಂಸನೀಯ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಉಲ್ಲೇಖದ ಪತ್ರದನ್ವಯ ಸದರಿ ನೌಕರರನ್ನು ದಿನಾಂಕ 30.09.2018ರ ಅಪರಾಹ್ನದಂದು ಕರ್ತವ್ಯದಿಂದ ಬಿಡುಗಡೆಗೊಳಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಪ್ರತಿಯನ್ನು:
1) ಜಿಲ್ಲಾಧಿಕಾರಿಯವರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ಕ್ರಮಕ್ಕಾಗಿ.